ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road (N.H. 167), Yergera -584133, Raichur, Karnataka
ಪರೀಕ್ಷಾ ವಿಭಾಗ
Email: registrarevrur@gmail.com

ಸಂಖ್ಯೆ: ಆಶ್ರೀಮವಾವಿರಾ/ಪರೀಕ್ಷಾ/2025-26/674 ದಿನಾಂಕ:29-11-25

**ಆಂತರಿಕ ಚಟುವಟಿಕೆಗಳ ಅಂಕಗಳ ಸಮನ್ವಯ ಸಮಿತಿಯ(IACO-C) ಸದಸ್ಯರಿಗೆ, ಪ್ರಾಂಶುಪಾಲರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೂಚನೆಗಳು**

**(ಎಲ್ಲಾ ಬಿ.ಎಡ್.ಕಾಲೇಜಿನ ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸುವುದು)**

1. ಪ್ರತಿ ವಿದ್ಯಾರ್ಥಿಯ ಹಾಜರಾತಿ ಥಿಯರಿ ತರಗತಿಯಲ್ಲಿ 80% ಮತ್ತು ಆಂತರಿಕ ಚಟುವಟಿಕೆಗಳಲ್ಲಿ 92% ರಷ್ಟು ಕಡ್ಡಾಯವಾಗಿ ಇರಬೇಕು.
2. ವಿದ್ಯಾರ್ಥಿಯ ಆಂತರಿಕ ಚಟುವಟಿಕೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಉಪನ್ಯಾಸಕರು ನೂರಕ್ಕೆ ನೂರರಷ್ಟು ಅಂಕಗಳು ನೀಡಿದರೆ ಅದಕ್ಕೆ ಸೂಕ್ತ ಕಾರಣ ಹಾಗೂ ಸ್ಪಷ್ಟೀಕರಣ ನೀಡಬೇಕು ಹಾಗೂ ಆಂತರಿಕ ಚಟುವಟಿಕೆಗಳ ಅಂಕಗಳ ಸಮನ್ವಯ ಸಮಿತಿಯ(**IACO-C**) ಮುಂದೆ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಬೇಕು.
3. ವಿದ್ಯಾರ್ಥಿಯು ತನ್ನ ಎಲ್ಲಾ ಚಟುವಟಿಕೆಗಳನ್ನು ನಿಗದಿತ ಸಮಯದಲ್ಲಿ ಮುಗಿಸಬೇಕು ಮತ್ತು ಯಾವುದೇ ಒಂದು ಇಲ್ಲವೇ ಕೆಲವು ಚಟುವಟಿಕೆಗಳು/ದತ್ತ ಯೋಜನೆಗಳು ಅಪೂರ್ಣಗೊಳಿಸದಲ್ಲಿ ಅಂತಹ ವಿದ್ಯಾರ್ಥಿಯನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. (ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಮಾವಳಿಯ ಪ್ರಕಾರ)
4. ಇಂತಹ ವಿದ್ಯಾರ್ಥಿಗಳು ಆ ಸೆಮಿಸ್ಟರ್‌ನಲ್ಲಿ ವಿಶ್ವವಿದ್ಯಾನಿಲಯ ನಿರ್ಧರಿಸಿದ ದಂಡವನ್ನು ಪಾವತಿಸಿ ಅನುಮತಿ ಪಡೆದು **IACO-C** ಸಮಿತಿಯ ಮುಂದೆ ಹಾಜರಾಗಬೇಕು.
5. ಯುಯುಸಿಎಮ್ಎಸ್ ನಲ್ಲಿ ನಮೂದಾದ ಆಂತರಿಕ ಅಂಕಗಳ ಮುದ್ರಿತ ಪಟ್ಟಿಯನ್ನು ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರ ವಿಭಾಗಕ್ಕೆ ವಿಶ್ವವಿದ್ಯಾನಿಲಯದ ಇ-ಮೇಲ್ (registrarevrur@gmail.com) ಮುಖಾಂತರ ಸಮಿತಿ ಸಮೀಕ್ಷಿಸಿದ ನಂತರ ಕಳುಹಿಸಿಕೊಡಬೇಕು.
6. ವಿದ್ಯಾರ್ಥಿಗಳು ಕಡ್ಡಾಯವಾಗಿ **IACO-C** ಸಮಿತಿಯು ನಿಗದಿಪಡಿಸಿದ ಸಮಯ ಮತ್ತು ದಿನಾಂಕದಂದು ಭೌತಿಕವಾಗಿ ಹಾಜರಿರಬೇಕು, ಒಂದು ವೇಳೆ ಹಾಜರಾಗದಿದ್ದರೆ ಅಂತಹ ವಿದ್ಯಾರ್ಥಿಗಳನ್ನು ಗೈರು ಹಾಜರಿ ಎಂದು ಪರಿಗಣಿಸಲಾಗುವುದು. ನಂತರದಲ್ಲಿ ಈ ಸಮಿತಿಯ ಮುಂದೆ ಹಾಜರಾಗಲು ಅವಕಾಶವಿಲ್ಲ. ವಿದ್ಯಾರ್ಥಿಗಳು ಕಾಲೇಜಿನ ಸಮವಸ್ತ್ರದೊಂದಿಗೆ ಆಂತರಿಕ ಚಟುವಟಿಕೆಗಳ ಸಮನ್ವಯ ಸಮಿತಿಯ ಮುಂದೆ ಹಾಜರಾಗಬೇಕು.
7. ಕಾಲೇಜಿನ ಪ್ರಾಂಶುಪಾಲರು, ಬೋಧಕ ವರ್ಗದವರು ಮತ್ತು ವಿದ್ಯಾರ್ಥಿಗಳು ಸಮನ್ವಯ ಸಮಿತಿಗೆ ಯಾವುದೇ ರೀತಿಯ ಶಿಫಾರಸ್ಸು ಮತ್ತು ಒತ್ತಡಗಳನ್ನು ತರಬಾರದು, ಹಾಗೂ ಆಂತರಿಕ ಚಟುವಟಿಕೆಯ ಅಂಕಗಳ ಸಮನ್ವಯ ಸಮಿತಿಯ ವಿಕ್ಷಣೆಯ ಸಮಯದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರು ಅಥವಾ ಇನ್ನಿತರರು ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೇನಾದರೂ ಕಂಡುಬಂದರೆ ಅಂತಹ ಕಾಲೇಜಿನ ವಿರುದ್ಧ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.
8. ವಿದ್ಯಾರ್ಥಿಗಳ ಆರೋಗ್ಯದ ಸಮಸ್ಯೆ ಅಥವಾ ಇನ್ಯಾವುದೇ ಕಾರಣಗಳಿದ್ದಲ್ಲಿ ಅದು ಅನಿವಾರ್ಯವಾದಲ್ಲಿ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಮುಂದೆ **IACO-C** ನಿಗದಿಪಡಿಸಿದ ದಿನದಂದು ಅಂತಹ ವಿದ್ಯಾರ್ಥಿಗಳು ಕುಲಸಚಿವರು ಮೌಲ್ಯಮಾಪನ ವಿಭಾಗದಲ್ಲಿ ಹಾಜರಾಗವುದಕ್ಕೆ ಅವಕಾಶ ನೀಡಲಾಗಿದೆ.
9. ಕಾಲೇಜಿನ ಪ್ರಾಂಶುಪಾಲರು ಆಂತರಿಕ ಅಂಕಗಳ ಪಟ್ಟಿಯಲ್ಲಿನ ಅಂಕಗಳು ಹಾಗೂ ಯುಯುಸಿಎಮ್ಎಸ್ (UUCMS)ನಲ್ಲಿ ನಮೂದಿಸಿದ ಅಂಕಗಳಲ್ಲಿ ವ್ಯತ್ಯಾಸ ಇರದಂತೆ ನೋಡಿಕೊಳ್ಳಬೇಕು. ಹಾಗೇನಾದರೂ ಆದಲ್ಲಿ ಪ್ರಾಂಶುಪಾಲರೇ ಅದಕ್ಕೆ ನೇರ ಹೊಣೆಗಾರರಾಗುತ್ತಾರೆ ಹಾಗೂ ವಿಶ್ವವಿದ್ಯಾನಿಲಯದ ನಿಯಮಾವಳಿ ಪ್ರಕಾರ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.
10. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿಯು ನಿಗದಿಪಡಿಸಿದ ದಿನ **IACO-C** ಸಮಿತಿಯ ಮುಂದೆ ಗೈರು ಹಾಜರಾದರೆ, ಅಪೂರ್ಣದತ್ತ ಯೋಜನೆಗಳ, Incomplete Records ಹಾಗೂ Multiple Handwriting ಇದ್ದರೆ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿನಿಯ ಪಟ್ಟಿಯನ್ನು ಆಯಾ ಕಾಲೇಜಿನ **IACO-C**